ಎದ್ದು ಬರುತಾರೆ ನೋಡೆ |ತಾ|ಎದ್ದು ಬರುತಾರೆ ನೋಡೆ||
ಮುದ್ದು ಬೃಂದಾವನದ ಮಧ್ಯದೊಳಗಿಂದ
ತಿದ್ದಿ ಹಚ್ಚಿದ ನಾಮ ಮುದ್ರೆಗಳೊಪ್ಪುತಲಿ||ಪ||
ಗಲದೊಳು ಶ್ರೀತುಳಸಿ ನಳಿನಾಕ್ಷಿಮಾಲೆಗಳು
ಚೆಲುವ ಮುಖದೊಳು ಹೊಳೆವ ದಂತಗಳಿಂದ||೧||
ಹೃದಯ ಸದನದಲ್ಲಿ ಪದುಮನಾಭನ ಭಜಿಸಿ
ಮುದಮನದಿಂದ ನಿತ್ಯ ಸದಮಲರೂಪತಾಳಿ||೨||
ದಾತ ಗುರು ಜಗನ್ನಾಥವಿಠಲನ
ಪ್ರೀತಿಯ ಪಡಿಸುತ ದೂತರ ಪೊರೆಯುತ ||೩||

www.yousigma.com